**ಕರ್ನಾಟಕ ರಾಜ್ಯ ಸರ್ಕಾರ**
**ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)**

# ಪ್ರಥಮ ಪಿಯುಸಿ ಮಾದರಿ ಪ್ರಶ್ನೆ ಪತ್ರಿಕೆ
## ವಿಷಯ : ಮನೋವಿಜ್ಞಾನ(32)

**ಸಮಯ: 3 ಗಂಟೆ** **ಒಟ್ಟು ಪ್ರಶ್ನೆಗಳ ಸಂಖ್ಯೆ:44** **ಗರಿಷ್ಠ ಅಂಕ: 80**

**(ಕನ್ನಡ ಆವೃತ್ತಿ)**

---

**ಸೂಚನೆಗಳು:**

**1. ಪ್ರಶ್ನೆ ಪತ್ರಿಕೆಯು ಎ,ಬಿ,ಸಿ,ಡಿ ಮತ್ತು ಇ ಎಂಬ ಐದು ಭಾಗಗಳನ್ನು ಒಳಗೊಂಡಿದೆ ಮತ್ತು I, II, III, IV, V, VI, VII, VIII ವಿಭಾಗಗಳನ್ನು ಹೊಂದಿದೆ.**

**2. ಎಲ್ಲಾ ಭಾಗಗಳು ಕಡ್ಡಾಯವಾಗಿರುತ್ತವೆ.**

**3. ಉತ್ತರವನ್ನು ಸಂಪೂರ್ಣವಾಗಿ ಇಂಗ್ಲೀಷ್ ಅಥವಾ ಕನ್ನಡದಲ್ಲಿ ಬರೆಯಬೇಕು.**

**4. ಭಾಗ 'ಎ' ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.**

## ಭಾಗ - ಎ

**I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ : (5X1=5)**

1) --------------- ಯು ಸಂತೋಷದ ಮತ್ತು ಹೆಚ್ಚಾಗಿ ಲೈಂಗಿಕ ಬಯಕೆಗಳ ತೃಪ್ತಿಗಾಗಿ ಸುಪ್ತಾವಸ್ಥೆಯ ಬಯಕೆಯಿಂದ ಪ್ರೇರೇಪಿಸಲ್ಪಟ್ಟಿದೆ.
ಎ) ವರ್ತನಾವಾದ (ಬಿ) ಸಮಗ್ರ ಮನೋವಿಜ್ಞಾನ
(ಸಿ) ಮನೋ ವಿಶ್ಲೇಷಣೆ (ಡಿ) ಮಾನವತವಾದ

2) ------------ ಪರೀಕ್ಷೆಯಲ್ಲಿ ಪ್ರಶ್ನೆಗಳನ್ನು ಚಿಹ್ನೆಗಳು ಮತ್ತು ಚಿತ್ರಗಳಿಂದ ತಯಾರಿಸಲಾಗುತ್ತದೆ.
ಎ) ಮೌಖಿಕ (ಬಿ) ಮೌಖಿಕವಲ್ಲದ
(ಸಿ) ಸಾಮರ್ಥ್ಯ (ಡಿ) ವೇಗ

3) ------------------- ದಲ್ಲಿ ವ್ಯಕ್ತಿಯು ಜೀವನದುದ್ದಕ್ಕೂ ಬೆಳೆಯುತ್ತಾ ಬದಲಾಗುತ್ತಾ ಹೋಗುತ್ತಾನೆ
.
ಎ) ವಿಕಾಸ (ಬಿ) ಪಕ್ವತೆ
(ಸಿ) ವಿಕಸನ (ಡಿ) ಬೆಳವಣಿಗೆ

4) ಆಕಾಶವೇ ನಮ್ಮ ಮೇಲೆ ಬಿದ್ದರೆ ಏನಾಗುತ್ತದೆ? ಎಂಬುದು -------------- ಪ್ರೇರಣೆಗೆ ಉದಾಹರಣೆಯಾಗಿದೆ.
ಎ) ಸಾಧನಾ ಪ್ರೇರಣೆ (ಬಿ) ಅಧಿಕಾರ ಪ್ರೇರಣೆ
(ಸಿ) ಕುತೂಹಲ ಮತ್ತು ಅನ್ವೇಷಣಾ ಪ್ರೇರಣೆ (ಡಿ) ಸಾಂಘಿಕ ಪ್ರೇರಣೆ

5) ---------------- ಅನುಬಂಧದಲ್ಲಿ ಅನುಬಂಧಿತ ಪ್ರಚೋದನೆ ನೀಡಿದ ಸ್ವಲ್ಪ ಸಮಯದ ನಂತರ ಸಹಜ ಪ್ರಚೋದನೆ ನೀಡಲಾಗುವುದು.
ಎ) ಸುಳುಹು (ಬಿ) ಹಿಮ್ಮುಖ
(ಸಿ) ಏಕಕಾಲಿಕ (ಡಿ) ವಿಳಂಬಿತ

**II. ಆವರಣದಲ್ಲಿ ಕೊಟ್ಟಿರುವ ಪದಗಳಿಂದ ಸೂಕ್ತವಾದ ಪದಗಳನ್ನು ಆರಿಸುವ ಮೂಲಕ ಖಾಲಿ ಜಾಗಗಳನ್ನು ಭರ್ತಿ ಮಾಡಿ. (5X1=5)**

**(ಮೌಕಿಕ,ಗಾತ್ರ ಸ್ಥಿರತೆ,ಸಂಜ್ಞಾನಾತ್ಮಕ ಮನೋವಿಜ್ಞಾನದ ದೃಷ್ಟಿಕೋನ,ಜೈವಿಕ, ಯೂರಿ ಬ್ರಾನ್ ಫೆನ್ ಬ್ರೆನರ್ , ಸಿಗ್ಮಂಡ್ ಫ್ರಾಯ್ಡ್)**

6) ಸಮಗ್ರ ವಿಧಾನ ಮತ್ತು ರಚನಾತ್ಮಕ ವಿಧಾನ ಅಂಶಗಳು ಸಂಯೋಜಿಸಲ್ಪಟ್ಟು----------------- ದ ಬೆಳವಣಿಗೆಗೆ ಕಾರಣವಾಯಿತು.

7) ----------------ಪರೀಕ್ಷೆಗಳನ್ನು ತೆಗೆದುಕೊಳ್ಳಲು ಸಾಕ್ಷರತೆಯ ಅಗತ್ಯವಿದೆ.

8) ------------------ರವರ ವಿಕಾಸ ಸಂದರ್ಭೋಚಿತ ದೃಷ್ಟಿಕೋನವು ವ್ಯಕ್ತಿಯ ಬೆಳವಣಿಗೆಯಲ್ಲಿ ಪರಿಸರದ ಅಂಶಗಳ ಪಾತ್ರವನ್ನು ಒತ್ತಿ ಹೇಳುತ್ತದೆ.

9)ಕಣ್ಣಿನಿಂದ ವಸ್ತುವಿನ ಅಂತರದಲ್ಲಿನ ಬದಲಾವಣೆಯೊಂದಿಗೆ ನಮ್ಮ ಅಕ್ಷಿಪಟಲದ ಚಿತ್ರದ ಗಾತ್ರವು ಬದಲಾಗುತ್ತದೆ ಇದನ್ನು -------------------- ಎನ್ನುತ್ತಾರೆ.

10)ಬಾಯಾರಿಕೆ ------------------ಪ್ರೇರಣೆಗೆ ಉದಾಹರಣೆಯಾಗಿದೆ.

**III. ಹೊಂದಿಸಿ ಬರೆಯಿರಿ.** **(5X1=5)**

11)

| ಅ | ಬ |
|---|---|
| ಎ) ವರ್ತನೆಗಳು | i) ಸಂವೇದನಾ ವಿಧಾನ |
| ಬಿ) ನಿರಂತರ ಅವಧಾನ | ii) ಆಲೋಚನೆಯ ವಿನ್ಯಾಸ |
| ಸಿ) ಸ್ಮೃತಿ ತಂತ್ರಗಳು | iii) ಮ್ಯಾಸ್ಲೋ ರವರ ಅಗತ್ಯತೆಗಳ ಶ್ರೇಣಿ |
| ಡಿ) ಮಾನಸಿಕ ಚಿತ್ರ | iv) ಜ್ಞಾಪಕ ಶಕ್ತಿಯನ್ನು ಉತ್ತಮಪಡಿಸಿಕೊಳ್ಳುವ ತಂತ್ರಗಳು |
| ಇ) ಆತ್ಮಸಿದ್ಧಿ | v) ಪ್ರತಿವರ್ತಗಳು ಮತ್ತು ಪ್ರತಿಕ್ರಿಯೆಗಳು |
| | VI) ವಿವರಣೆ |

**IV. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ.**

**(5X1=5)**

12) ಸ್ಮೃತಿಯ ವಿಧಗಳನ್ನು ಹೆಸರಿಸಿ.

13)ಎಲ್ಲಾ ಬೆಕ್ಕುಗಳಿಗೂ ನಾಲ್ಕು ಕಾಲುಗಳಿವೆ, ನನಗೂ ನಾಲ್ಕು ಕಾಲುಗಳಿವೆ ಆದ್ದರಿಂದ ನಾನು ಬೆಕ್ಕೆ ಆಗಿದ್ದೇನೆ. ಇದು ಯಾವ ವಿವೇಚನೆಗೆ ಉದಾಹರಣೆಯಾಗಿದೆ?

14)ತನ್ನ ಪ್ರಭಾವವನ್ನು ಬೀರಲು ಬೇರೆಯವರೊಂದಿಗೆ ವಾದಿಸುವುದು ಯಾವ ಮನೋ-ಸಾಮಾಜಿಕ ಪ್ರೇರಣೆಗೆ ಉದಾಹರಣೆಯಾಗಿದೆ?

15)ಶಾಸ್ತ್ರೀಯ ಅನುಬಂಧ ಕಲಿಕೆಯನ್ನು ಮೊದಲು ಪರಿಶೋಧಿಸಿದವರು ಯಾರು?

16) ಗೆಸ್ಟಾಲ್ಟ್ ಪಂಥದ ಯಾವುದಾದರೂ ಒಬ್ಬ ಪ್ರಮುಖ ಮನೋವಿಜ್ಞಾನಿಯನ್ನು ಹೆಸರಿಸಿ?

## ಭಾಗ-ಬಿ

**V.ಈ ಕೆಳಗಿನ ಯಾವುದಾದರೂ ಏಳು ಪ್ರಶ್ನೆಗಳಿಗೆ 2 ರಿಂದ 3 ವಾಕ್ಯಗಳಲ್ಲಿ ಉತ್ತರಿಸಿ.**

**(7X2=14)**

17) ಸಂಜ್ಞಾನಾತ್ಮಕ ಮನೋವಿಜ್ಞಾನದ ಕುರಿತು ಬರೆಯಿರಿ.
18)ಮನೋವಿಜ್ಞಾನ ಎಂದರೇನು?ವ್ಯಾಖ್ಯಾನಿಸಿ.

19) ನಿಯಂತ್ರಿತ ಗುಂಪು ಎಂದರೇನು?

20) ಸಂವೇದನಾ ಗತಿಯ ಹಂತದ ಗುಣಲಕ್ಷಣಗಳನ್ನು ಬರೆಯಿರಿ
21)ಟಾಪ್ ಡೌನ್ ವಿಧಾನಕ್ಕೆ ಒಂದು ಉದಾಹರಣೆ ನೀಡಿ.
22)ಪುನರ್ಬಲನಗಳು ಎಂದರೇನು?
23)ಮಾದರಿ ಕಲಿಕೆ ಎಂದರೇನು?
24)ಕ್ರಮಬದ್ದ ಸ್ಮೃತಿ ಎಂದರೇನು?
25)ವಿಸ್ಮೃತಿ ಎಂದರೇನು?
26)ಸಮಸ್ಯೆಯನ್ನು ಪರಿಹರಿಸುವಲ್ಲಿ ಒಬ್ಬರು ಎದುರಿಸಬಹುದಾದ ಯಾವುದಾದರೂ ಎರಡು ಅಡೆತಡೆಗಳನ್ನು ಗುರುತಿಸಿ.
27)ಹಸಿವು ಮತ್ತು ಬಾಯಾರಿಕೆಯ ಅಗತ್ಯತೆಗಳ ಜೈವಿಕ ಆಧಾರಗಳು ಯಾವುವು ಹೆಸರಿಸಿ.

## ಭಾಗ-ಸಿ

**VI. ಈ ಕೆಳಗಿನ ಯಾವುದಾದರೂ ಆರು ಪ್ರಶ್ನೆಗಳಿಗೆ 10 ರಿಂದ12 ವಾಕ್ಯಗಳಲ್ಲಿ ಉತ್ತರಿಸಿ.**

**(6X4=24)**

28) ವರ್ತನೆ ಎಂದರೇನು? ಆಂತರಿಕ ಮತ್ತು ಬಾಹ್ಯ ವರ್ತನೆಗೆ ಉದಾಹರಣೆ ನೀಡಿ.
29) ಮನೋವಿಜ್ಞಾನದ ವಿಕಾಸದ ಸಂಕ್ಷಿಪ್ತ ವಿವರಣೆ ನೀಡಿ.
30)ಸಂದರ್ಶನ ಮತ್ತು ಪ್ರಶ್ನಾವಳಿಗಳ ನಡುವಿನ ವ್ಯತ್ಯಾಸಗಳಾವುವು?
31)ಡಾIIಕೃಷ್ಣಾರವರು ನರ್ಸರಿ ಶಾಲೆಯ ಮಕ್ಕಳನ್ನು ಆಟದ ಸಮಯದಲ್ಲಿ ಅವರ ವರ್ತನೆಗಳನ್ನು ಅಭ್ಯಾಸ ಮಾಡಲು ಅವರ ಮೇಲೆ ಪ್ರಭಾವ ಬೀರದೆ ಅಥವಾ ಅವರ ವರ್ತನೆಗಳನ್ನು ನಿಯಂತ್ರಿಸದೆ ಅವಲೋಕಿಸುವುದು ಯಾವ ರೀತಿಯ ವಿಧಾನವನ್ನು ಒಳಗೊಂಡಿದೆ? ಈ ಪ್ರಕ್ರಿಯೆಯನ್ನು ವಿವರಿಸಿ ಅನುಕೂಲ ಮತ್ತು ಅನಾನುಕೂಲಗಳನ್ನು ಚರ್ಚಿಸಿ.
32)ಸಾಮಾಜಿಕ ಸಾಂಸ್ಕೃತಿಕ ಅಂಶಗಳು ವಿಕಾಸದ ಮೇಲೆ ಹೇಗೆ ಪ್ರಭಾವ ಬೀರುತ್ತವೆ?
33)ಅವಧಾನವನ್ನು ವ್ಯಾಖ್ಯಾನಿಸಿ. ಅದರ ಗುಣಲಕ್ಷಣಗಳನ್ನು ವಿವರಿಸಿ.
34)ಶಾಸ್ತ್ರೀಯ ಅನುಬಂಧ ಸಹಚರ್ಯೆಯ ಮೂಲಕ ಕಲಿಕೆಯನ್ನು ಹೇಗೆ ಪ್ರದರ್ಶಿಸುತ್ತದೆ?

35)ಘೋಷಣಾತ್ಮಕ ಮತ್ತು ಕಾರ್ಯವಿಧಾನ ಸ್ಮೃತಿಗಳ ನಡುವಿನ ವ್ಯತ್ಯಾಸವನ್ನು ಬರೆಯಿರಿ.
36)ಸೃಜನಾತ್ಮಕ ಆಲೋಚನೆಯನ್ನು ಹೇಗೆ ಹೆಚ್ಚಿಸಬಹುದು?
37)ನಕಾರಾತ್ಮಕ ಸಂವೇಗಗಳನ್ನು ನಿರ್ವಹಿಸುವುದು ಏಕೆ ಮುಖ್ಯ? ನಕಾರಾತ್ಮಕ ಸಂವೇಗಗಳನ್ನು ನಿರ್ವಹಿಸುವ ಮಾರ್ಗಗಳನ್ನು ಸೂಚಿಸಿ.

## ಭಾಗ-ಡಿ

**VII. ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 20 ರಿಂದ25 ವಾಕ್ಯಗಳಲ್ಲಿ ಉತ್ತರಿಸಿ. (2X6=12)**

38) ವಿಚಾರಣೆಯ ವಿಧಾನವಾಗಿ ಪ್ರಾಯೋಗಿಕ ವಿಧಾನದ ಸಾಮರ್ಥ್ಯಗಳು ಮತ್ತು ದೌರ್ಬಲ್ಯಗಳನ್ನು ಚರ್ಚಿಸಿ.
39) ಪ್ರತ್ಯಕ್ಷಾನುಭವದ ಸಂಘಟನೆಯ ತತ್ವಗಳನ್ನು ಕುರಿತು ಸಂಪೂರ್ಣವಾಗಿ ವಿವರಿಸಿ.
40)ಸಂಜ್ಞಾನಾತ್ಮಕ ಕಲಿಕೆಯ ವಿವಿಧ ರೂಪಗಳನ್ನು ವಿವರಿಸಿ.
41)ಭಾಷೆ ಇಲ್ಲದೆ ಆಲೋಚನೆಯೂ ನಡೆಯುತ್ತದೆಯೇ ಚರ್ಚಿಸಿ.

## ಭಾಗ - ಇ
## (ಪ್ರಾಯೋಗಿಕ ವಿಭಾಗ)

**VIII. ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ. (2X5=10)**

42) ವರದಿಯ ಖಚಿತತೆಯ ಮೇಲೆ ನಿರ್ದೇಶಿತ ಅವಲೋಕನದ ಪರಿಣಾಮವನ್ನು ನಿರ್ಧರಿಸುವ ಪ್ರಯೋಗದಲ್ಲಿ ನೀವು ಅನುಸರಿಸಿದ ಯೋಜನೆ ಮತ್ತು ಪ್ರಯೋಗ ವಿಧಾನವನ್ನು ಬರೆಯಿರಿ.

43)ಎರಡು ಸ್ನಾಯುಕ್ರಿಯೆಗಳ ನಡುವೆ ಅವಧಾನ ವಿಭಜನೆಯ ಸಾಧ್ಯತೆಯನ್ನು ಅಧ್ಯಯನ ಮಾಡುವ ಪ್ರಯೋಗದಲ್ಲಿ ನೀವು ಅನುಸರಿಸಿದ ಯೋಜನೆ ಹಾಗೂ ಪ್ರಯೋಗ ವಿಧಾನವನ್ನು ಬರೆಯಿರಿ

44)ಕಲಿಕೆ ಮತ್ತು ಧಾರಣದ ಮೇಲೆ ಸಂಕಲಿತ ಮತ್ತು ವಿತರಣ ವಿಧಾನಗಳ ಪರಿಣಾಮವನ್ನು ನಿರ್ಧರಿಸುವ ಪ್ರಯೋಗದಲ್ಲಿ ನೀವು ಅನುಸರಿಸಿದ ಯೋಜನೆ ಹಾಗೂ ಪ್ರಯೋಗ ವಿಧಾನವನ್ನು ಬರೆಯಿರಿ

---